ಕೌಟುಂಬಿಕ ಕಲಹ ಪ್ರಕರಣದಲ್ಲಿ ಹೈಕೋರ್ಟ್ ಆದೇಶ

'ಮಗಳು ತಂದೆಯ ಬಳಿ ಬೇಡ, ತಾಯಿಯ ಬಳಿಯಲ್ಲೇ ಇರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕಿತ್ಸೆ ಕೊಡಿಸಲು ವೈದ್ಯರ ಬಳಿಗೆ ಕರೆದುಕೊಂಡು ಹೋಗುವುದಾಗಿ ತಿಳಿಸಿ ಅಪ್ರಾಪ್ತ ವಯಸ್ಸಿನ ಮಗಳನ್ನು ಪಶ್ಚಿಮ ಬಂಗಾಳಕ್ಕೆ ಕರೆದೊಯ್ದ ತಂದೆಯ ಕ್ರಮವನ್ನು ಆಕ್ಷೇಪಿಸಿರುವ ಹೈಕೋರ್ಟ್, ಮಗಳನ್ನು ತಾಯಿಯ ಬಳಿಗೆ ಕಳುಹಿಸುವಂತೆ ಆದೇಶಿಸಿದೆ.

ಮಹಿಳೆಯೊಬ್ಬರು ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಲೋಕ್ ಆರಾಧೆ ಮತ್ತು ವಿಜಯಕುಮಾರ ಎ. ಪಾಟೀಲ ಅವರಿದ್ದ ವಿಭಾಗೀಯ ನ್ಯಾಯಪೀಠ, 'ಈ ಪ್ರಕರಣದಲ್ಲಿ ತಂದೆ (ಅರ್ಜಿದಾರಳ ಪತಿ) ಮಗಳನ್ನು ಅಕ್ರಮವಾಗಿ ಪಶ್ಚಿಮ ಬಂಗಾಳಕ್ಕೆ ಕರೆದೊಯ್ದಿರುವ ಆರೋಪ ಸಾಬೀತಾಗಿದೆ' ಎಂದು ಅಭಿಪ್ರಾಯಪಟ್ಟಿತು.

ಮಗಳನ್ನು ಕೂಡಲೇ ಅರ್ಜಿದಾರರ ಸುಪರ್ದಿಗೆ ಒಪ್ಪಿಸುವಂತೆ ಆಕೆಯ ಪತಿಗೆ ನಿರ್ದೇಶಿಸಿತು.

'ಮಗಳ ಶಾಶ್ವತ ಸುಪರ್ದಿಗೆ ಕೋರಿ ಪತ್ನಿ ಬೆಂಗಳೂರಿನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಮತ್ತೊಂದೆಡೆ ತಾನು ಮಗುವಿನ ಕಾನೂನುಬದ್ಧ ಪೋಷಕ ಎಂಬುದಾಗಿ ಘೋಷಿಸುವಂತೆ ಕೋರಿ ಪಶ್ಚಿಮ ಬಂಗಾಳದಲ್ಲಿ ಪತಿ ಅರ್ಜಿ ಸಲ್ಲಿಸಿದ್ದಾರೆ. ಈ ಎರಡೂ ಅರ್ಜಿಗಳು ಇತ್ಯರ್ಥವಾಗುವರೆಗೆ ಮಗಳು ತಾಯಿಯ ವಶದಲ್ಲಿ ಇರಬೇಕು. ತಂದೆಗೆ ಮಗಳ ಭೇಟಿಯ ಹಕ್ಕು ನೀಡಬೇಕು' ಎಂದು ನಿರ್ದೇಶಿಸಿತು.

'ಮಗಳು ತಂದೆಯೊಂದಿಗೆ ಸಾಮಾಜಿಕ, ಭೌತಿಕ ಮತ್ತು ಮಾನಸಿಕ ಸಂಪರ್ಕವನ್ನು ಕಳೆದುಕೊಳ್ಳಬಾರದು. ದಂಪತಿ ಪ್ರತ್ಯೇಕವಾಗಿದ್ದರೂ ಮಗಳಿಗೆ ಪೋಷಕರ ಉತ್ತಮ ಆರೈಕೆ ದೊರೆಯುವಂತಾಗಬೇಕು. ಆ ದಿಸೆಯಲ್ಲಿ ನಿತ್ಯವೂ ಶಾಲೆಯಿಂದ ಮನೆಗೆ ಬಂದ ನಂತರ ತಂದೆ, ಮಗಳಿಗೆ ಫೋನ್ ಅಥವಾ ವಿಡಿಯೊ ಕರೆ ಮಾಡಿ ಯೋಗಕ್ಷೇಮ ವಿಚಾರಿಸಬಹುದು. ಮಗುವಿನ ಪ್ರತಿದಿನದ ಬೆಳವಣಿಗೆಯ ಬಗ್ಗೆ ಪತ್ನಿಯೂ ಪ್ರತಿ ಭಾನುವಾರ ಪತಿಗೆ ಮಾಹಿತಿ ನೀಡಬೇಕು. ಪತಿ ವಾರಾಂತ್ಯದಲ್ಲಿ ಬೆಂಗಳೂರಿಗೆ ಬಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಮಗಳ ಜೊತೆಗೆ ಸಮಯ ಕಳೆಯಬಹುದು' ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಪ್ರಕರಣವೇನು?

2012ರ ಫೆಬ್ರುವರಿ 22ಕ್ಕೆ ಅಂತರ್ ಧರ್ಮೀಯ ವಿವಾಹವಾಗಿದ್ದ ದಂಪತಿಗೆ 2016ರ ಜೂನ್ 25ರಂದು ಮಗಳು ಜನಿಸಿದ್ದಳು. ದಂಪತಿ 2017ರ ಜನವರಿಯಿಂದ 2018ರ ಜೂನ್‌ವರೆಗೆ ಬೆಂಗಳೂರಿನಲ್ಲಿ ನೆಲೆಸಿದ್ದರು. ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿದ್ದರು. ಪತ್ನಿ ಮಗಳೊಂದಿಗೆ ಬೆಂಗಳೂರಿನಲ್ಲಿ ನೆಲೆಸಿದ್ದರು. ಕೆಲಸದ ನಿಮಿತ್ತ ಪತಿ ಪಶ್ಚಿಮ ಬಂಗಾಳದಲ್ಲಿ ವಾಸವಾಗಿದ್ದರು.

2022ರ ಡಿಸೆಂಬರ್ 16ರಂದು ಬೆಂಗಳೂರಿಗೆ ಬಂದಿದ್ದ ಪತಿ, ಮಗಳನ್ನು ವೈದ್ಯರ ಬಳಿಗೆ ಚಿಕಿತ್ಸೆಗೆ ಕರೆದುಕೊಂಡು ಹೋಗುವುದಾಗಿ ತಿಳಿಸಿ ಪಶ್ಚಿಮ ಬಂಗಾಳಕ್ಕೆ ಕರೆದೊಯ್ದ ಆರೋಪ ಎದುರಿಸುತ್ತಿದ್ದಾರೆ.

ಇಬ್ಬರಿಗೆ 'ಚುಟುಕು ಭೂಷಣ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಭಾಲ್ಕಿ (ಬೀದರ್ ಜಿಲ್ಲೆ): ಸಾಣೆಹಳ್ಳಿ ಮಠದ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮತ್ತು ಅನುಭವ ಮಂಟಪದ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಅವರು ಚುಟುಕು ಭೂಷಣ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು ಕನ್ನಡ ಚುಟುಕು ಸಾಹಿತ್ಯ ಪರಿಷತ್ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ.

ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಅವರನ್ನು ಚುಟುಕು ಚೇತನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಗಳನ್ನು ಭಾಲ್ಕಿಯ ಚನ್ನಬಸವಾಶ್ರಮದಲ್ಲಿ ಮೇ 25ರಂದು ನಡೆಯುವ ಪರಿಷತ್ತಿನ 11ನೇ ರಾಜ್ಯ ಸಮ್ಮೇಳನದಲ್ಲಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395

ನೋಂದಾಯಿತ ಕಚೇರಿ: ವರ್ಕ್ ಅವಿನ್ಯೂ ಕ್ಯಾಂಪಸ್, ನಂ.77, ಅಸೆಂಟ್ ಬಿಲ್ಡಿಂಗ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560 095. ಕರ್ನಾಟಕ, ಭಾರತ

ಈ–ಮೇಲ್: corporateaffairs@teamlease.com | ವೆಬ್‌ಸೈಟ್: https://group.teamlease.com/

ಮಾರ್ಚ್ 31, 2023ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ವರ್ಷಕ್ಕೆ ಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕಿಗಳು ಲಕ್ಷ ರೂಪಾಯಿಗಳಲ್ಲಿ)

ವಿವರಗಳು	ಏಕಿಕೃತ			ಕ್ರೋಢೀಕೃತ		
	31.03.2023ಕ್ಕೆ ಕೊನೆಯಾದ 3 ತಿಂಗಳಿಗೆ	31.03.2023ಕ್ಕೆ ಕೊನೆಯಾದ 12 ತಿಂಗಳಿಗೆ	31.03.2022ಕ್ಕೆ ಕೊನೆಯಾದ 3 ತಿಂಗಳಿಗೆ	31.03.2023ಕ್ಕೆ ಕೊನೆಯಾದ 3 ತಿಂಗಳಿಗೆ	31.03.2023ಕ್ಕೆ ಕೊನೆಯಾದ 12 ತಿಂಗಳಿಗೆ	31.03.2022ಕ್ಕೆ ಕೊನೆಯಾದ 3 ತಿಂಗಳಿಗೆ
	ಪರಿಶೋಧಿತ	ಪರಿಶೋಧಿತ	ಪರಿಶೋಧಿತ	ಪರಿಶೋಧಿತ	ಪರಿಶೋಧಿತ	ಪರಿಶೋಧಿತ
ಕಾರ್ಯಾಚರಣೆಗಳಿಂದ ಒಟ್ಟು ಆದಾಯ	1,79,053.16	6,87,617.59	1,54,161.62	2,02,727.41	7,86,999.75	1,81,741.02
ಸದರಿ ಅವಧಿಗೆ ತೆರಿಗೆಗೆ ನಂತರ ನಿವ್ವಳ ಲಾಭ / (ನಷ್ಟ) (ಅಸಾಮಾನ್ಯ ಮತ್ತು/ಅಥವಾ ಅಸಾಧಾರಣ ಐಟಂಗಳು)	2,552.55	10,150.69	2,396.97	2,868.24	11,736.25	3,432.73
ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಮತ್ತು/ಅಥವಾ ಅಸಾಧಾರಣ ಐಟಂಗಳ ನಂತರ)	2,206.02	9,719.62	2,847.59	2,437.39	11,154.98	3,162.67
ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು)]	2,207.00	9,736.93	2,856.53	2,480.93	11,281.85	3,191.25
ಪೇಯ್ಡ್–ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.)	1,709.68	1,709.68	1,709.68	1,709.68	1,709.68	1,709.68
ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು) – ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಷೀಟ್ ಪ್ರಕಾರ	76,037.97	76,037.97	66,141.89	79,052.79	79,052.79	67,611.24
ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕೀಕರಣಗೊಂಡಿಲ್ಲ)						
(ಎ) ಮೂಲ	12.90	56.85	16.66	14.00	65.12	18.05
(ಬಿ) ಡೈಲ್ಯೂಟೆಡ್	12.90	56.85	16.66	14.00	65.12	18.05

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ("ವಿಧಾಯಕಗಳು") ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, ಮಾರ್ಚ್ 31, 2023ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ವರ್ಷದ ಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಪರಿಶೋಧಿತ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಲ್ಲಿ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (https://group.teamlease.com/) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ ಮಾರ್ಚ್ 31, 2023ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ವರ್ಷದ ಕ್ರೋಢೀಕೃತ ಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಲಿಯು 17ನೇ ಮೇ, 2023ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) ನಲ್ಲಿ ವಿಧಿಸಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ದಿನಾಂಕ: ಮೇ 17, 2023
ಸ್ಥಳ: ಬೆಂಗಳೂರು

ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ನಿರ್ದೇಶಕ ಮಂಡಲಿಗಾಗಿ ಮತ್ತು ಅದರ ಪರವಾಗಿ
ಸಹಿ/–
ಅಶೋಕ್ ಕುಮಾರ್ ನೆಡುರುಮಲ್ಲಿ
ವ್ಯವಸ್ಥಾಪಕ ನಿರ್ದೇಶಕರು
DIN: 00151814

ಬನ್ನೇರುಘಟ್ಟ ಉದ್ಯಾನ: ಸಾರ್ವಜನಿಕ ಸಾರಿಗೆ ಕುರಿತು ಪರಿಸರ ಜಾಗೃತಿ

ಬಸ್‌ನಲ್ಲಿ ಬಂದವರಿಗೆ ಚಿಟ್ಟೆ ಪಾರ್ಕ್‌ಗೆ ಉಚಿತ ಪ್ರವೇಶ

ಪ್ರಜಾವಾಣಿ ವಾರ್ತೆ

ಆನೇಕಲ್: ಪರಿಸರ ದಿನಾಚರಣೆ ಅಂಗವಾಗಿ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ವಿವಿಧ ಜಾಗೃತಿ ಕಾರ್ಯಕ್ರಮ ರೂಪಿಸಲಾಗಿದೆ. ಸೋಮವಾರ ಸಾರ್ವಜನಿಕ ಸಾರಿಗೆ ಬಳಸಿ ಬನ್ನೇರುಘಟ್ಟ ಉದ್ಯಾನಕ್ಕೆ ಬರುವ ಪ್ರವಾಸಿಗರಿಗೆ ಚಿಟ್ಟೆ ಪಾರ್ಕ್ ಭೇಟಿಗೆ ಉಚಿತ ಪ್ರವೇಶ ವ್ಯವಸ್ಥೆ ಮಾಡಲಾಗಿದೆ.

ಜೂನ್ 5ರವರೆಗೆ ಚಿಟ್ಟೆ ಪಾರ್ಕ್‌ಗೆ ಉಚಿತ ಪ್ರವೇಶದ ವ್ಯವಸ್ಥೆ ಮಾಡಲಾಗಿದೆ. ಮೇ 22, ಮೇ 29 ಮತ್ತು ಜೂನ್ 5ರಂದು ಸಾರ್ವಜನಿಕ ಸಾರಿಗೆಯಲ್ಲಿ ಬರುವ ಪ್ರವಾಸಿಗರಿಗೆ ಉಚಿತ ಪ್ರವೇಶವಿದೆ. ಬಸ್ ಟಿಕೆಟ್ ಅಥವಾ ಬಸ್ ಪಾಸ್ ತೋರಿಸಿ ಪ್ರವೇಶ ಪಡೆಯಬಹುದಾಗಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸುನೀಲ್ ಪನ್ವಾರ್ ತಿಳಿಸಿದರು.

ಪ್ರತಿ ಕುಟುಂಬ ಸ್ವಂತ ವಾಹನಗಳ ಬದಲು ಸಾರ್ವಜನಿಕ ಸಾರಿಗೆಯಲ್ಲಿ ಬಂದರೆ ಇಂಧನ ಉಳಿತಾಯ, ಪರಿಸರದಲ್ಲಿ ವಾಯು ಮಾಲಿನ್ಯ ತಡೆಯಲು ಸಾಧ್ಯ. ಹಾಗಾಗಿ ಪರಿಸರ ದಿನಾಚರಣೆಯ ಅಂಗವಾಗಿ ಉದ್ಯಾನದಲ್ಲಿ ವಿನೂತನ ಕಾರ್ಯಕ್ರಮ ರೂಪಿಸಲಾಗಿದೆ. ಇದರಿಂದಾಗಿ ಸಾರ್ವಜನಿಕ ಸಾರಿಗೆ ಪ್ರಯಾಣ ಬೆಂಬಲಿಸಿದಂತಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಉದ್ಯಾನಕ್ಕೆ ಭೇಟಿ ನೀಡುವ ಜನರಿಂದ ಪ್ರತಿದಿನ ಸಸಿ ನೆಡುವ ಕಾರ್ಯಕ್ರಮ ರೂಪಿಸಲಾಗಿದೆ. ಪ್ರತಿಯೊಬ್ಬರು ಪರಿಸರ ಸಂರಕ್ಷಿಸುವ ಪ್ರತಿಜ್ಞೆ ಮಾಡಿ ಸಹಿ ಮಾಡುವ ವ್ಯವಸ್ಥೆಯನ್ನು ಜೈವಿಕ ಉದ್ಯಾನದ ಚಿಟ್ಟೆ ಪಾರ್ಕ್‌ನಲ್ಲಿ ರೂಪಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಪ್ರವಾಸಿಗರು ಪರಿಸರ ಸಂರಕ್ಷಣೆಯ ಪ್ರತಿಜ್ಞೆಗೆ ಸಹಿ ಮಾಡಿದರು

ನಗರದಲ್ಲಿ ಇಂದು

'ಅಡ್ವಾನ್ಸಡ್ ಮಟಿರಿಯಲ್ಸ್ ಫಾರ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಅಪ್ಲಿಕೇಶನ್' ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಮನಮೋಹನ್ ಆರ್. ಕಲಗಾಲ್, ಜಗದೀಶ್ ಜಿ., ವೆಂಕಟೇಶ್ವರಲು ಕೆ., ಸಿ.ಎನ್. ಬಾಲಕೃಷ್ಣ, ರೇಣುಕಾಪ್ರಸಾದ್ ಕೆ.ವಿ., ಡಿ. ಹನುಮಂತಯ್ಯ, ಆಯೋಜನೆ: ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸ್ಥಳ: ಕುವೆಂಪು ಕಲಾಕ್ಷೇತ್ರ, ಕೆ.ಆರ್. ರಸ್ತೆ. ವಿ.ವಿ. ಪುರ, ಬೆಳಿಗ್ಗೆ 9ರಿಂದ

'ಸಂದೇಶ' ಮ್ಯೂಸಿಯಂ ಆಫ್ ಕಮ್ಯೂನಿಕೇಷನ್ ಉದ್ಘಾಟನೆ: ಆಯೋಜನೆ ಅಂಚೆ ಇಲಾಖೆ, ಸ್ಥಳ: ಸಂದೇಶ ಮ್ಯೂಸಿಯಂ ಆಫ್ ಕಮ್ಯೂನಿಕೇಶನ್, ಅಶೋಕನಗರ, ಮ್ಯೂಸಿಯಂ ರಸ್ತೆ, ಬೆಳಿಗ್ಗೆ 10ರಿಂದ

ರಾಷ್ಟ್ರೀಯ ಮಟ್ಟದ ನಿರ್ವಹಣೆ, ತಂತ್ರಜ್ಞಾನ ಹಾಗೂ ಸಾಂಸ್ಕೃತಿಕ ಉತ್ಸವ-ಸಮ್ಮಿಟ್-2023: ಉದ್ಘಾಟನೆ: ಕಾರ್ತಿಕ್ ತಲ್ಲಮ್, ಅಧ್ಯಕ್ಷತೆ: ಕೆ.ಎಂ. ನಾಗರಾಜ್, ಉಪಸ್ಥಿತಿ: ಮಹೇಶ್ ಕುಮಾರ್ ಕೆ.ಆರ್., ಆಯೋಜನೆ ಮತ್ತು ಸ್ಥಳ: ಕಮ್ಯೂನಿಟಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಜಯನಗರ, ಬೆಳಿಗ್ಗೆ 10ರಿಂದ

ದೀಪಕ್ ಶಂಕರ್ ಅವರ 'ಇನ್‌ಟು ದಿ ವೈಲ್ಡ್' ಏಕವ್ಯಕ್ತಿ ಛಾಯಾಚಿತ್ರಗಳ ಪ್ರದರ್ಶನದ ಉದ್ಘಾಟನೆ: ದೀಪಾ ಶ್ರೀಧರ್, ಉಪಸ್ಥಿತಿ: ದೀಪಕ್ ಶಂಕರ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ ಪ್ರದರ್ಶನ, ಉದ್ಘಾಟನೆ ಸಂಜೆ 5

ಮಂಜುನಾಥ ಮದಿಹಳ್ಳಿ ಅವರ 'ರೈ' ಪುಸ್ತಕ ಬಿಡುಗಡೆ: ರಿಕಿ ಮುತ್ತಪ್ಪ ರೈ, ಪ್ರಸ್ತಾವ: ಮಂಜುನಾಥ ಮದಿಹಳ್ಳಿ, ಉಪಸ್ಥಿತಿ: ಭಾವನಾ ಬೆಳಗೆರೆ, ಪ್ರಕಾಶ ರೈ, ಬಿ.ಎನ್. ಜಗದೀಶ್, ಬಿ. ಗುಣರಂಜನ್ ಶೆಟ್ಟಿ, ರಾಮಚಂದ್ರಯ್ಯ, ನಾರಾಯಣಸ್ವಾಮಿ ಜಿ., ಆಯೋಜನೆ: ಮದಿಹಳ್ಳಿ ಪ್ರಕಾಶನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

'ಕೈಗಾರಿಕಾ ಕ್ಷೇತ್ರದಲ್ಲಿ ಕನ್ನಡ ಸಂಘಗಳ ಪಾತ್ರ' ಕುರಿತ ಉಪನ್ಯಾಸ: ಸು. ಜಗದೀಶ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಅಂತರರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನ, 'ದೇವದಾಸಿ ಮತ್ತು ಜೋಗತಿ ಪರಂಪರೆ' ಕುರಿತು ವಿಚಾರಸಂಕಿರಣ: ಉದ್ಘಾಟನೆ: ಟಿ.ಎಸ್. ನಾಗಾಭರಣ, ಅತಿಥಿ: ಮಂಜಮ್ಮ ಜೋಗತಿ, ಅಧ್ಯಕ್ಷತೆ: ಜೆ.ಎಂ. ಮಲ್ಲಿಕಾರ್ಜುನಯ್ಯ, 'ಮಾತಾ' ನಾಟಕ ಪ್ರದರ್ಶನ: ಪ್ರಸ್ತುತಿ: ಕಾಜಾಣ, ನಿರ್ದೇಶನ: ಬೇಲೂರು ರಘುನಂದನ್, ಆಯೋಜನೆ: ಪರಂಪರೆ ಕೂಟ, ಇತಿಹಾಸ ವಿಭಾಗ ಕೆಎಲ್‌ಇ ಕಾನೂನು ಮಹಾವಿದ್ಯಾಲಯ, ಬೆಂಗಳೂರು ಹಿಸ್ಟೋರಿಯನ್ ಸೊಸೈಟಿ, ಸ್ಥಳ: ಕೆ.ಎಲ್.ಇ. ಎಸ್. ನಿಜಲಿಂಗಪ್ಪ ಕಾಲೇಜು, ಸಭಾಂಗಣ, ರಾಜಾಜಿನಗರ, ಮಧ್ಯಾಹ್ನ 1.30

ಪ್ರವಚನ ವಾಹಿನಿ: 'ನಾಕಾಣದ ಭಾರತ' ಕುರಿತು ಉಪನ್ಯಾಸ: ಬಿ.ಡಿ. ಪಟೇಲ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ದಾಸವಾಣಿ' ಗಾಯನ: ಪ್ರಣೀತಾ ಟಿ. ಮಣೂರ್, ತಬಲಾ: ಶ್ರೀನಿವಾಸ ಕಾಖಂಡಕಿ, ಕೊಳಲು: ಸುಧನ್ವ ಟಿ. ಮಣೂರ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 1ನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7

ಹರಿನಾಮ ಸಂಕೀರ್ತನೆ: ಗಾಯನ: ಬೃಂದಾ ಸತ್ಯಪ್ರಸಾದ್, ವಸುಧಾ ಉದ್ದಗಟ್ಟಿ, ಕೀ–ಬೋರ್ಡ್: ಅಮಿತ್ ಶರ್ಮಾ,ತಬಲಾ: ಮುರಳಿ ನಾರಾಯಣರಾವ್ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

TIMKEN

ಟಿಮ್‌ಕೆನ್ ಇಂಡಿಯಾ ನಿಯಮಿತ

CIN - L29130KA1996PLC048230

ನೋಂದಣಿ ಕಛೇರಿ: 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100
ದೂರವಾಣಿ : 080 41362000 ಫ್ಯಾಕ್ಸ್ : 080 41362010 ಇ–ಮೇಲ್ : tilinvestor@timken.com
ವೆಬ್‌ಸೈಟ್ : www.timken.com/en-in

ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ಮಾರ್ಚ್ 31, 2023ಕ್ಕೆ ಕೊನೆಗೊಂಡ ತ್ರೈಮಾಸಿಕ ಹಾಗೂ ವಾರ್ಷಿಕ ಅವಧಿಯ ಪರಿಶೋಧಿತವಾದ ಆರ್ಥಿಕ ಫಲಿತಾಂಶದ ಪ್ರತ್ಯೇಕವಾದ ಸಾರಾಂಶ

(ರೂ. ದಶಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	31/03/2023 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಾದ)	31/03/2023 ಕ್ಕೆ ಕೊನೆಗೊಂಡ ಪ್ರಸ್ತುತ ಸಾಲಿನ ಒಂದು ವರ್ಷದ ಅಂಶಿಗಳು (ಪರಿಶೋಧಿತವಾದ)	31/03/2022 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಾದ)
1.	ಕಾರ್ಯಾಚರಣೆಯಿಂದ ಒಟ್ಟು ಆದಾಯ (ನಿವ್ವಳ)	8,091	28,598	6,723
2.	ನಿವ್ವಳ ಲಾಭ / (ನಷ್ಟ) ಈ ಅವಧಿಗೆ (ತೆರಿಗೆ, ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ಮುನ್ನ)	1,369	5,235	1,610
3.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ಮುನ್ನ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ)	1,369	5,235	1,610
4.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ನಂತರ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ #)	1,045	3,907	1,213
5.	ಈ ಅವಧಿಯ ಒಟ್ಟು ಸಮಗ್ರ ಆದಾಯ {ಲಾಭ/(ನಷ್ಟ) ಒಳಗೊಂಡಂತೆ ಈ ಅವಧಿಗೆ (ತೆರಿಗೆ ನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆ ನಂತರ)}	1,049	3,915	1,214
6.	ಈಕ್ವಿಟಿ ಷೇರು ಬಂಡವಾಳ	752.19	752.19	752.19
7.	ಪ್ರತಿ ಷೇರಿನ ಗಳಿಕೆಗಳು (ಪ್ರತಿ ರೂ.10/– ರಂತೆ) (ನಿರಂತರ ಕಾರ್ಯಾಚರಣೆಗಳಿಗೆ) ಮೂಲತವಾದ ಮತ್ತು ದುರ್ಬಲಗೊಳಿಸಿದ *ವಾರ್ಷಿಕವಲ್ಲದ	13.89*	51.95	16.13*

ಮೇಲೆ ತಿಳಿಸಿರುವ ಫಲಿತಾಂಶವು ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ತ್ರೈಮಾಸಿಕ ಅವಧಿಯ ಆರ್ಥಿಕ ಫಲಿತಾಂಶದ ಸಂಪೂರ್ಣವಾದ ನಮೂನೆಯ ಪ್ರತ್ಯೇಕವಾದ ಸಾರಾಂಶ. ತ್ರೈಮಾಸಿಕದ ಆರ್ಥಿಕ ಫಲಿತಾಂಶದ ಪೂರ್ಣ ನಮೂನೆಯು ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ (BSE: www.bseindia.com & NSE: www.nseindia.com) ಮತ್ತು ಕಂಪನಿ ವೆಬ್‌ಸೈಟ್ www.timken.com/en-in ನಲ್ಲಿ ವೀಕ್ಷಿಸಬಹುದು.

ಬೆಂಗಳೂರು
17 ಮೇ, 2023

ಮಂಡಳಿಯ ಆದೇಶದಂತೆ
ಸಹಿ/– ಸಂಜಯ್ ಕೌಲ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
DIN : 05159352

Azadi Ka Amrit Mahotsav

G20 ಭಾರತ 2023 INDIA

ಇ–ಇನ್‌ವಾಯ್ಸ್

ವ್ಯವಹಾರವನ್ನು ಸುಲಭಗೊಳಿಸುವ ನಿಟ್ಟಿನಲ್ಲಿ ಒಂದು ಹೆಜ್ಜೆ

ಆಗಸ್ಟ್ 01, 2023 ರಿಂದ ಜಾರಿಗೊಂಡಂತೆ, ಹಿಂದಿನ ಯಾವುದೇ ಹಣಕಾಸು ವರ್ಷದಲ್ಲಿ ಸರಾಸರಿ ರೂ.5 ಕೋಟಿ# ವಾರ್ಷಿಕ ವಹಿವಾಟು ಹೊಂದಿದ್ದ ತೆರಿಗೆದಾರರು* ಬಿ2ಬಿ ಸರಕುಗಳ ಅಥವಾ ಸೇವೆಗಳ ಪೂರೈಕೆಗಾಗಿ, ಅಥವಾ ಎರಡನ್ನೂ ಪೂರೈಸುವುದಕ್ಕಾಗಿ, ಅಥವಾ ರಫ್ತುಗಳ ಪೂರೈಕೆಗಾಗಿ ಇ–ಇನ್‌ವಾಯ್ಸ್ ಪಡೆದುಕೊಳ್ಳುವುದು ಕಡ್ಡಾಯ.

ಇ–ಇನ್‌ವಾಯ್ಸ್‌ಗಳಲ್ಲಿ ಒಂದು ವಿಶಿಷ್ಟ ಇನ್‌ವಾಯ್ಸ್ ರೆಫರೆನ್ಸ್ ನಂಬರ್ ಇರುತ್ತದೆ, ಇದು ಇನ್‌ವಾಯ್ಸ್ ರಜಿಸ್ಟ್ರೇಶನ್ ಪೋರ್ಟಲ್‌ನ ಮುಖಾಂತರವೇ ಬಂದಿರುತ್ತದೆ

ಇ–ಇನ್‌ವಾಯ್ಸ್‌ನ ಪ್ರಯೋಜನಗಳು

- ಯೂನಿಫಾರಂ ಸ್ಟಾಂಡರ್ಡ್
- ಜಿಎಸ್‌ಟಿ ಪೋರ್ಟಲ್‌ಗೆ ಆಟೋ ರಿಪೋರ್ಟಿಂಗ್
- ಇ–ವೇ ಬಿಲ್‌ನ ಆಟೋ ಜನರೇಶನ್
- ಅತ್ಯಲ್ಪ ಅನುಸರಣಾ ಹೊರೆ
- ಟ್ರಾನ್ಸ್‌ಕ್ರಿಪ್ಷನಲ್ ದೋಷಗಳಲ್ಲಿ ಕಡಿತ
- ಅಸಂಖ್ಯಾತ ಇನ್‌ವಾಯ್ಸ್‌ಗಳ ಪ್ರಸರಣ
- ಆಟೋ ಪಾಪ್ಯುಲೇಟೆಡ್ ಜಿಎಸ್‌ಟಿ ರಿಟರ್ನ್
- ಕಾಗದ ಬಳಕೆ ಅಲ್ಪ

ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಅಧಿಸೂಚನೆ ಸಂ. 10/2023–ಕೇಂದ್ರಿಯ ತೆರಿಗೆ ದಿನಾಂಕ 10.05.2023 ಪರಿಶೀಲಿಸಿ ಮತ್ತು ಪ್ರಧಾನ ಅಧಿಸೂಚನೆ ಸಂ. 13/2020–ಕೇಂದ್ರಿಯ ತೆರಿಗೆ ದಿನಾಂಕ 21.03.2020 ರೊಂದಿಗೆ ಓದಿಕೊಳ್ಳಿ.

*ನಿರ್ದಿಷ್ಟ ಅಧಿಸೂಚಿತ ಪ್ರವರ್ಗಗಳ ತೆರಿಗೆದಾರರನ್ನು ಹೊರತುಪಡಿಸಿ (ವಿವರಗಳಿಗಾಗಿ ದಯವಿಟ್ಟು ಸ್ಕ್ಯಾನ್ ಮಾಡಿ)

#ಪ್ರಸ್ತುತ ಈ ಮಿತಿಯು ರೂ.10 ಕೋಟಿ ಆಗಿದೆ

cbc 15502/13/0003/2324

Central Board of Indirect Taxes and Customs

@cbic_india @cbicindia @cbicindia @CBICINDIA @cbic www.cbic.gov.in